ತಾವೀಗ ಮಾಡಬೇಕೆಂದಿರುವ ಏರ್ಪಾಡು ಕೇವಲ ಮೈಸೂರು ಸಂಸ್ಥಾನಕ್ಕೆ ಮಾತ್ರವೇ ಅನ್ವಯಿಸುತ್ತದೆಂದು ತಾವು ಹೇಳಿದ್ದೀರಿ. ವ್ಯಾಪಾರದ ವಿಷಯದಲ್ಲಿ ಹೀಗೆ ನಮ್ಮಷ್ಟಕ್ಕೆ ನಾವೇ ಮಾಡಿಕೊಳ್ಳುವುದು ಸರಿಹೋಗುವುದಿಲ್ಲ. ನಮಗೆ ಪಕ್ಕದಲ್ಲಿ ಇತ್ತಕಡೆ ಬೊಂಬಾಯಿ ಅತ್ತಕಡೆ ಮದ್ರಾಸು ಮತ್ತು ಆಂಧ್ರ ಪ್ರಾಂತ್ಯಗಳಿವೆ. ಮತ್ತು ಸಾಮಾನುಗಳನ್ನು ಸಾಗಿಸಬೇಕಾದರೆ ಹೆಚ್ಚಾಗಿ ರೈಲ್ವೆ ಮುಖಾಂತರವೇ ಸಾಗಿಸುತ್ತೇವೆ. ಆದರೆ, ಈ ಆಕ್ಟಿನಲ್ಲಿ ಹೇಳಿರುವ ತೂಕವೇ ಬೇರೆ, ರೈಲ್ವೆ ತೂಕವೇ ಬೇರೆ, ಅಲ್ಲಿ ಒಂದು ಸೇರಿಗೆ 80 ತೊಲಗಳು. ಕೆಲವರು 28 ಪೌಂಡಿನ ಒಂದು ಮಣ ಎಂತಲೂ ಇಟ್ಟುಕೊಂಡಿದ್ದಾರೆ. ಕನ್ನಡದಲ್ಲಿ ರಾತಲು ಎಂದು ಹೇಳಿ ಒಂದು ಪೌಂಡಿಗೆ ಹೇಳುತ್ತಾರೆ. ಸಾಮಾನ್ಯವಾಗಿ ಅಳತೆ, ತೂಕದ ಸಾಧನಗಳು ನಮ್ಮ ದೇಶದಲ್ಲೇ ಒಂದು ರೀತಿಯಾಗಿದೆ, ಬೊಂಬಾಯಿನಲ್ಲೇ ಬೇರೆ ರೀತಿಯಾಗಿದೆ, ಮದ್ರಾಸಿನಲ್ಲಿ ಇನ್ನೊಂದು ರೀತಿಯಿದೆ. ಇನ್ನು ಉತ್ತರ ದೇಶಕ್ಕೆ ಹೋದರೆ ಅಲ್ಲಿ ಅಕ್ಕಿ, ತರಕಾರಿ ಮೊದಲುಗೊಂಡು ಎಲ್ಲವನ್ನೂ ತೂಕಮಾಡಿಕೊಡುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ಸಂದರ್ಭದಲ್ಲಿ ಒಂದು ಮಾತು ಹೇಳಿದರೆ ಪ್ರಯೋಜನವಾಗುತ್ತದೆಂದು ನಾನು ತಿಳಿದಿದ್ದೇನೆ. ಈಗ ನಾವು ತಂದಿರುವ ಬಿಲ್ಲು ನಮಗೆ ಹೆಚ್ಚು proximity ಇರುವ ಆಂಧ್ರ, ಮದ್ರಾಸ್, ಬೊಬಾಯಿಗೆ ಹೊಂದಿಕೊಂಡಿರುವಂತಿದೆ. ನಮ್ಮ ಆಕ್ಟಿಗೂ ಅಲ್ಲಿರುವುದಕ್ಕೂ ಅಷ್ಟಾಗಿ ವ್ಯತ್ಯಾಸವಿಲ್ಲ. ಅಷ್ಟೇನೂ ಏರುಪೇರುಗಳಿಲ್ಲ. ಸ್ವಲ್ಪ ವ್ಯತ್ಯಾಸವಿದೆ ಅಷ್ಟೆ.

ಶ್ರೀ ಪಿ. ಆರ್. ರಾಮಯ್ಯ.—ಮದ್ರಾಸಿನಲ್ಲಿ ಅಳತೆಯಿರುವುದೇ ಬೇರೆ ರೀತಿಯಾಗಿದೆ. ಅಲ್ಲಿ ಪಲಂ ಎಂದು ಉಪಯೋಗಿಸುತ್ತಿದ್ದಾರೆ. ಅದಕ್ಕೂ ನಮ್ಮ ಸೇರಿಗೂ ವ್ಯತ್ಯಾಸ ತಿಳಿದುಕೊಂಡರೆ ಒಳ್ಳೆಯದಾಗುತ್ತದೆ. ನಮ್ಮ ಅಳತೆಗೂ ಅವರ ಅಳತೆಗೂ ಏನು ಸಂಬಂಧವೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ. 'ಪಡಿ' ಎಂಬುದು ಬೇರೆ ರೂಢಿಯಲ್ಲಿದೆ. ಬಳ್ಳಾರಿಯಲ್ಲಿ ಬೇರೆ ರೀತಿಯಾದ ಅಳತೆಗಳು ನಡೆಯುತ್ತಿವೆ. ಆದ್ದರಿಂದ ಅಳತೆಗಳ ವಿಷಯದಲ್ಲಿ ಪಕ್ಕದ ಪ್ರಾಂತ್ಯಗಳಲ್ಲಿ ಯಾವ ರೀತಿಯಿದೆಯೆಂದು ನಮಗೆ ತಿಳಿವಳಿಕೆ ಕೊಟ್ಟರೆ-ಒಳ್ಳೆಯದೆಂದು ಹೇಳುತ್ತೇನೆ.

***Sri A. BHEEMAPPA NAIK.**—We can legislate so far as our State is concerned, keeping in view as far as possible what is prevailing in the neighbouring areas. But our trade extends not only to the neighbouring areas but also to areas like C.P. and U.P. where the products are purchased by weight but not measures. It is only by convention either by weight or measure they purchase here. When we purchase from U.P., we say, per maund so much and negotiation is carried on accordingly. The person trading will be intelligent enough to have transactions with other States. So, it does not affect us in any way. It is only within the State that we have to control and regulate. This Act is quite sufficient for purposes of weighing and measuring. We need not take into consideration what is obtaining in other areas.

That uniformity can only be brought by a Central Act. That may be done in a different way. So far as we are concerned, our Act would be sufficient for checking the unconscionable trader or business man or seeing that proper weights are used within the State. So far as a businessman is concerned, he is quite conversant with the weights obtaining in other States. Therefore, this Act, as it is, is quite all right. We need not take into consideration what is obtaining in other States.

Sri H. SIDDAVEERAPPA.—I will clarify your doubt.

Mr. SPEAKER.—I want to bring to the notice of the Hon'ble Members that this is not the way of proceeding with the discussion of the Bill. No side answers are allowed. I thought the Hon'ble Member had concluded his speech.

Sri H. SIDDAVEERAPPA.—I will clear his doubts. ಮದ್ರಾಸಿನಲ್ಲಿ $41\frac{2}{3}$ ಫ್ಲೂಯಿಡ್ ಔನ್ಸ್‌ಗಳಿಗೆ ಒಂದು ಸೇರು. ನಮ್ಮಲ್ಲಿ $44\frac{1}{2}$ ಫ್ಲೂಯಿಡ್ ಔನ್ಸ್‌ಗಳಿಗೆ ಒಂದು ಸೇರು. ಅವರ ಸೇರಿಗೂ, ನಮ್ಮ ಸೇರಿಗೂ ಇರುವ ವ್ಯತ್ಯಾಸ ಇಷ್ಟೇನೆ. There is one relevant point raised by you. You will have to remember that it is only the Parliament that has to prescribe the standards of measures of capacity. So far as

(SRI H. SIDDAVEERAPPA.)

weights are concerned, Parliament has already consented to a measure which is a law throughout India. So far as standard measures of capacity are concerned, they are a Central subject and since Parliament has not yet done it, we have no power to do it for the whole of India.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ನಾನು ಈಗ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ—ನಾವು ಈಗ ಈ ಮಸೂದೆಯನ್ನು ಪರ್ಯಾಲೋಚನೆ ಮಾಡುವ ಕಾಲದಲ್ಲಿ ನಮ್ಮ ಅಕ್ಕಪಕ್ಕಗಳ ದೇಶದಲ್ಲಿ ಈ ಅಳತೆ ಮತ್ತು ತೂಕದ ವ್ಯವಸ್ಥೆಗಳು ಯಾವ ರೀತಿಯಾಗಿರುತ್ತವೆ ಎನ್ನುವುದನ್ನೂ ಸಹ ನಾವು ನೋಡಬೇಕಾಗಿರುತ್ತದೆ. ಈ ಅಳತೆ ಮತ್ತು ತೂಕದ ವ್ಯವಸ್ಥೆಗಳು ಎಲ್ಲಾ ಕಡೆಯೂ ಒಂದೇ ಸಮನಾಗಿರುವಂತೆ ನಾವು ಒಂದು ಬುದ್ಧಿವಂತಿಕೆಯನ್ನು ಉಪಯೋಗಿಸಿ ಇದನ್ನು ಮಾಡಬೇಕಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನು ಈಗ ವ್ಯಾಪಾರಗಾರರಿಗೆ ಬುದ್ಧಿಯಿಲ್ಲವೆಂದು ಆಕ್ಷೇಪಣೆ ಮಾಡುತ್ತಿಲ್ಲ. ವ್ಯಾಪಾರಗಾರರೆಲ್ಲಾ ಬಹಳ ಬುದ್ಧವಂತರು. ಆದರೆ ಇಲ್ಲಿರತಕ್ಕಂಥ ನಮ್ಮ ಅಳತೆಗೂ ಮತ್ತು ಪಕ್ಕದ ಪ್ರಾಂತ್ಯಗಳಲ್ಲಿರತಕ್ಕಂಥ ಅಳತೆಗೂ ವ್ಯತ್ಯಾಸಗಳಿರಬಾರದು. ಇದು ಬಹಳ ಅಗತ್ಯವಾದಂಥ ವಿಷಯ. ಈ ಅಂಶವನ್ನು ಶ್ರೀ ಭೀಮಪ್ಪನಾಯಕರೂ ಕೂಡ ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಆದರೆ ಅವರಿಗೆ ಅರ್ಥವಾಗದಂಥ ವಿಷಯವನ್ನು ಮಾತ್ರ ಅವರು ಒಪ್ಪಿಕೊಳ್ಳಲಾರರು. . . . .

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಮ್ಮ ಪಕ್ಕದ ಪ್ರಾಂತ್ಯವಾದ ಮದ್ರಾಸ್ ಸರ್ಕಾರದವರು ಇಟ್ಟುಕೊಂಡಿರತಕ್ಕಂಥ ಒಂದು ಸೇರು ಎಷ್ಟಿದೆ ಅಂದರೆ ಅದು $41\frac{2}{3}$ ಫ್ಲೂಯಿಡ್ ಔನ್ಸುಗಳ ತೂಕದಷ್ಟು ಇರುತ್ತದೆ. ಇಲ್ಲಿ ನಮ್ಮ ಸೇರು $44\frac{1}{2}$ ಫ್ಲೂಯಿಡ್ ಔನ್ಸುಗಳ ತೂಕವಿರತಕ್ಕದ್ದಾಗಿದೆ. ಇಷ್ಟೇ ಈಗಿರತಕ್ಕ ವ್ಯತ್ಯಾಸ.

ಶ್ರೀ ಪಿ. ಆರ್. ರಾಮಯ್ಯ.—ಆದರೆ ಈಗ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿರತಕ್ಕಂಥ ಈ ವಿಷಯಗಳನ್ನೆಲ್ಲಾ ನಾವು ಸರಿಯಾಗಿ ತಿಳಿದುಕೊಳ್ಳದೆ ನಾವೀಗ ಈ ಶಾಸನ ಮಾಡಬಾರದು. ಈ ದಿವಸ ಎಲ್ಲಾ ಕಡೆಗಳಲ್ಲೂ ಇರತಕ್ಕಂಥ ಈ ಎಲ್ಲಾ ವ್ಯತ್ಯಾಸಗಳನ್ನೂ ಸರಿಪಡಿಸಿದರೆ ಈ ವ್ಯಾಪಾರ ವ್ಯವಹಾರಗಳು ಎಲ್ಲ ಕಡೆಗಳಲ್ಲೂ ಒಂದೇ ಸಮನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಇದು ಜರೂರಾಗಿಯೂ ಆಗಬೇಕಾಗಿದೆ. ಈ ಸಂಬಂಧವಾಗಿ ತಾವು ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸುವುದು ಆವಶ್ಯಕ. ಈ ಅಳತೆ ಮತ್ತು ತೂಕದ ಸಾಧನಗಳು ಇಂಡಿಯಾ ದೇಶದಾದ್ಯಂತವೂ ಒಂದೇ ಸಮನಾಗಿ ಇರುವಂತೆ ಮಾಡಬೇಕಾದದ್ದು ತೀರ ಅಗತ್ಯ. ಒಂದೇ ರೀತಿಯಾಗಿ ಎಲ್ಲಾ ಆಹಾರ ಸಾಮಗ್ರಿಗಳ ಅಳತೆ ಮತ್ತು ತೂಕಗಳು ಹಿಮಾಚಲದಿಂದ ಹಿಡಿದು ರಾಮೇಶ್ವರದವರೆಗೂ ಒಂದೇ ರೀತಿಯಾಗಿರತಕ್ಕದ್ದು ಸಮಂಜಸವಾದದ್ದೆಂಬುದನ್ನು ದೇಶಾದ್ಯಂತವೂ ಇರತಕ್ಕಂಥ ಜನರೂ ಕೂಡ ಒಪ್ಪಿಕೊಳ್ಳುತ್ತಾರೆ. ಈ ದಿವಸ ಅನೇಕ ಕಡೆಗಳಲ್ಲಿ ಒಂದು ಸ್ಟ್ಯಾಂಡರ್ಡ್ ಮಟ್ಟದ ಅಳತೆ ಮತ್ತು ತೂಕದ ವ್ಯವಸ್ಥೆ ಇರುವುದಿಲ್ಲ. ಆದುದರಿಂದ ನಾವೀಗ ಕಾನೂನು ಮಾಡುವಾಗ ಆದಷ್ಟುಮಟ್ಟಿಗೂ ಸಾರ್ವತ್ರಿಕವಾಗಿ ಭರತಖಂಡದ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯಾಗಿ ಇದನ್ನು ಅನುಸರಿಸಬೇಕಾದದ್ದು ಅಗತ್ಯ ಮತ್ತು ಹಾಗೆ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಈ ಮಸೂದೆಯನ್ನು ಈಗ ನಾನು ಅಷ್ಟು ಅತ್ಯಗತ್ಯವಾಗಿ ಆಗಲೇಬೇಕೆಂದು ಹೇಳುವುದಕ್ಕೆ ತಯಾರಾಗಿಲ್ಲ. ಆದರೆ, ಈಗಿರತಕ್ಕಂಥ ವ್ಯತ್ಯಾಸಗಳನ್ನು ಮಾತ್ರ ತಪ್ಪಿಸಬೇಕಾದದ್ದು ನ್ಯಾಯ. ತಾವೀಗ ತಂದಿರತಕ್ಕಂಥ ಈ ತಿದ್ದುಪಡಿ ಮಸೂದೆಯನ್ನು ಇನ್ನೂ ಸ್ವಲ್ಪ ಕಾಲ ಮುಂದಕ್ಕೆ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲವೇ ಎನ್ನುವುದನ್ನೂ ಸಹ ತಾವು ಆಲೋಚಿಸಬೇಕಾಗಿದೆ. ಹೀಗೆ ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ—ಅಖಿಲ ಭಾರತ ಸರ್ಕಾರದವರು ಏನಾದರೂ ಈ ಬಗ್ಗೆ ಒಂದು ಭಾರತದ ಲೆವಲ್‌ನಲ್ಲಿ ಸಮ್ಮೇಳನವನ್ನು ಮಾಡಿ ಅಲ್ಲಿ ಈ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ತರುವಾಯ ಈ ಬಗ್ಗೆ ಒಂದು ಸರಿಯಾದ ತೀರ್ಮಾನವನ್ನು ತೆಗೆದುಕೊಂಡು ಇದನ್ನು ಮಾಡುವುದಾಗಿದ್ದರೆ ಅಂಥ ಒಂದು ತೀರ್ಮಾನ ಆದಮೇಲೆ ನಾವು ಈ ಕಾನೂನನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದದ್ದು ಸೂಕ್ತ. ಆದುದರಿಂದ ಈಗ ಸದ್ಯಕ್ಕೆ ಇದನ್ನು ಮುಂದುವರಿಸುವುದು ಸರಿಯೇ ಅಥವಾ ಅಲ್ಲವೇ ಎನ್ನುವುದನ್ನೂ ಕೂಡ ತಾವು ಈಗ ಪರ್ಯಾಲೋಚನೆ ಮಾಡಬೇಕಾಗಿದೆ. ಈಗ ತಾವು ಮಾಡಿರತಕ್ಕ ಆಲೋಚನೆ ಏನಿದೆಯೋ ಅದರ ಪ್ರಕಾರ ಇವುಗಳನ್ನು ತಾವು ಬದಲಾವಣೆ ಮಾಡಬಹುದು. ಹಾಗೆ ಮಾಡಿದ ಮೇಲೂ ತಪ್ಪುದಾರಿಗೆ ಹೋಗತಕ್ಕವರು ಇದ್ದೇ ಇರುತ್ತಾರೆ. ಆದರೆ ಹಾಗೆ ತಪ್ಪುಮಾಡತಕ್ಕವರ ಬಗ್ಗೆ ತಾವು ಒಂದು ಪೆನಾಲ್ಟಿ ವಿಧಿಸಬೇಕೆಂದು ಹೇಳಿದ್ದೀರಿ. ಈ ಕಾರ್ಯಕ್ರಮಗಳನ್ನು ಸರಿಯಾದಂಥ ರೀತಿಯಲ್ಲಿ ಜಾರಿಗೆ ತರಬೇಕಾಗಿದೆ. ಹೀಗೆ ಈ ಹಿಂದೆಯೂ ಕಾನೂನಿತ್ತು. ಆದರೆ, ಬೇಕಾದಷ್ಟು ಅನ್ಯಾಯಗಳು ನಡೆಯುತ್ತಲೇ ಇದ್ದುವು. ಈ ಸ್ಪ್ರಿಂಗ್ ಬ್ಯಾಲೆನ್ಸ್ ಇತ್ಯಾದಿಗಳು ಬೇಡಿ, ಆ ಸಾಮಾನ್ಯ ತಕ್ಕಡಿ ಇತ್ಯಾದಿಗಳನ್ನಾದರೂ ಯಾರು ಕ್ರಮವಾಗಿ ತನಿಖೆಮಾಡಿ ನೋಡಿದ್ದಾರೆ? ಈಗ ಇರತಕ್ಕಂಥ ಈ ತಕ್ಕಡಿಗಳು ಒಂದೂ ಸರಿಯಾಗಿಲ್ಲ. ಈ ಬಗ್ಗೆ ತಕ್ಕಷ್ಟು ಶಿಬ್ಬಂದಿಯನ್ನು ನೇಮಕ ಮಾಡುವುದಾದರೆ ಎಷ್ಟೋ ಅನುಕೂಲವಾದೀತು. ಈಗ ತಾವು ಹೇಳುವ ರೀತಿಯಲ್ಲಿ 24 ತೊಲೆಗಳಿಗೆ ಒಂದು ಸೇರು ಎಂದು ಆಗುತ್ತದೆ. ಇದು ಮುಂದೆ ಜಾರಿಗೆ ಬರತಕ್ಕ ಕಾನೂನಿಗೆ ಅನುಗುಣವಾಗಿರುತ್ತದೆ. ಈಗ ಕೆಲವು ಕಡೆ 20 ತೊಲೆಗಳಿಗೆ ಒಂದು 1 ಸೇರು ಎಂದು ಮಾಡಿದ್ದಾರೆ. ಒಂದು ಪೌಂಡಿಗೆ 40 ತೊಲಗಳಾಗುತ್ತದೆ. ಈಗ ನಾವು ಹೊಸದಾಗಿ ಏನೂ ಮಾಡುತ್ತಿಲ್ಲ. ಹಳೆಯದನ್ನೇ ಒಂದು ಪ್ರಪೋರ್ಷನೇಟಾಗಿ ಇಟ್ಟುಕೊಂಡು ಹೋಗುವಂತೆ ಮಾಡಬೇಕಾಗಿದೆ. ಈ 24 ತೊಲಗಳಿಗೆ ಒಂದು ಸೇರು ಎನ್ನುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. 20 ತೊಲಾಕ್ಕೆ ಅರ್ಧ ಪೌಂಡಾಗುತ್ತದೆ, ರೈಲ್ವೇ ಸೇರಿನಲ್ಲಿ ನಾಲ್ಕನೇ ಒಂದು ಭಾಗ ಆಗುತ್ತದೆ. ಈ 20 ತೊಲಾಕ್ಕೆ ಬಾಕಿ ತೂಕದ ವ್ಯವಸ್ಥೆಗಳೇನಿವೆಯೋ ಅವುಗಳಿಗೆ ಅಡ್ಜೆಸ್ಟ್‌ಮಾಡಿಕೊಂಡರೆ ಸರಿಹೋಗುತ್ತದೆ.

ಇನ್ನೂ ಬಾಕಿ ಈ ಅಳತೆ ಒಂದು ಸೇರು ಅನ್ನುವುದಕ್ಕೆ ತಾವು ಹೇಳಿರುವುದು ಬಹಳ ಸೈಂಟಿಫಿಕ್ ಆದಂಥ ಡೆಫೆನಿಷನ್ ಆಗಿದೆ. ಆದರೆ ಈ ದಿವಸ ಈ ಸೇರಿನಲ್ಲಿ ಅಳತೆಮಾಡುವಾಗ ತಲೆ ಸವರಿ ಅಳತೆಮಾಡುವುದು

ಇನ್ನೂ ಕೆಲವು ಕಡೆ ಹೋಗಿಲ್ಲ ; ಜಾರಿಯಲ್ಲಿದೆ. ಹೀಗೆ ಇನ್ನೂ ಅನೇಕ ಕಡೆಗಳಲ್ಲಿ ಅನೇಕ ತರಹೆಯ ಅಳತೆಗಳಿರುತ್ತವೆ. ಆದುದರಿಂದ ನಾವೀಗ ಈ ಕಾನೂನಿನಲ್ಲಿ ಯಾವ ರೀತಿ ಸೇರಿನ ಅಳತೆ ಇರಬೇಕು ಅನ್ನುವುದನ್ನು ನಿರ್ಧಾರ ಮಾಡಬೇಕಾಗಿದೆ. ಇನ್ನು ಈ ಹಿಟ್ಟು, ಅಕ್ಕಿ, ಬೇಳೆ ಇತ್ಯಾದಿ ಸಾಮಾನುಗಳನ್ನು ಯಾವ ರೀತಿಯಾಗಿ ಅಳತೆ ಮಾಡ ಬೇಕೆಂಬುದನ್ನೂ ಸಹ ಈಗ ಈ ಕಾನೂನಿನಲ್ಲಿ ನಿರ್ಧರಿಸಬೇಕಾಗಿದೆ. ಈಗಿನ ಹಾಗೆ ಮುಂದಕ್ಕೂ ಅಳತೆ ಮಾಡುವಾಗ ಈ ಸೇರಿನ ಮೇಲೆ ಕಾಣತಕ್ಕಂಥ 'ಶಿಖರ' ಇರಬೇಕೇ ಅಥವಾ ಹೋಗಬೇಕೆ ಅನ್ನುವುದರ ಬಗ್ಗೆ ತಾವು ಯಾವ ಒಂದು ತಿದ್ದುಪಡಿಯನ್ನೂ ತಂದಿಲ್ಲ. ಈ ವಿಚಾರವನ್ನೂ ಸಹ ತಾವು ತಿಳಿಸಬೇಕಾಗಿದೆ. ಈ ದಿವಸ ಈ ಬೆಣ್ಣೆ ಇತ್ಯಾದಿಗಳನ್ನು ಮಾರಾಟ ಮಾಡತಕ್ಕವರು ಕಾಡು ಕಲ್ಲುಗಳನ್ನಿಟ್ಟುಕೊಂಡು ವ್ಯಾಪಾರಮಾಡುತ್ತಿದ್ದಾರೆ. ಅವರನ್ನು ಯಾರೂ ತನಿಖೆ ಮಾಡುತ್ತಿಲ್ಲ. ಇದಕ್ಕೆಲ್ಲಾ ಸರಿಯಾದ ಶಿಬ್ಬಂದಿಯಿರಬೇಕು. ಮಾರತಕ್ಕವರ ಮತ್ತು ಕೊಳ್ಳತಕ್ಕವರ ನಡುವೆ ಒಂದು ಸರಿಯಾದ ವ್ಯವಸ್ಥೆಯಿರಬೇಕಾದರೆ ತಕ್ಕಷ್ಟು ಸರಿಯಾದಂಥ ಶಿಬ್ಬಂದಿಯಿರಬೇಕು. ಇದಕ್ಕೆ ಒಂದು ಸರಿಯಾದ ವ್ಯವಸ್ಥೆಯಿರಬೇಕು. ಹೀಗೆ ಸರ್ಕಾರದವರು ಒಂದು ಕಾನೂನನ್ನು ಮಾಡುವಾಗ ಈ ವಿಚಾರದಲ್ಲಿ ನಮ್ಮ ಛೇಂಬರ್ ಆಫ್ ಕಾಮರ್ಸಿನವರು ಏನು ಅಭಿಪ್ರಾಯಪಡುತ್ತಾರೆ ಎನ್ನುವುದನ್ನು ಈ ಸಭೆಗೆ ತಾವು ತಿಳಿಸಿದ್ದರೆ ಚೆನ್ನಾಗಿತ್ತು. ಇದೇ ರೀತಿ ಈಗ ಆ ದಾವಣಗೆರೆ, ಮೈಸೂರು ಮತ್ತು ಬೆಂಗಳೂರು ಈ ಸ್ಥಳಗಳಲ್ಲಿ ಮರ್ಚೆಂಟ್ಸ್ ಛೇಂಬರ್ಸ್ ಎಂದು ಬೇರೆ ಇರುತ್ತವೆ. ಅವರು ಈ ವಿಚಾರದಲ್ಲಿ ಏನೇನು ತೊಂದರೆಗಳಿವೆಯೆಂದು ಹೇಳುತ್ತಿದ್ದರೋ ಅವುಗಳನ್ನು ನಿವಾರಣೆ ಮಾಡುವುದಕ್ಕೆ ಅವರ ಸಲಹೆಗಳೇನಿದ್ದುವು ಎಂಬುದನ್ನೆಲ್ಲಾ ಸರ್ಕಾರದವರು ಸಂಗ್ರಹಣೆಮಾಡಿ ಈ ಸಭೆಗೆ ಆ ವಿಚಾರಗಳನ್ನೆಲ್ಲಾ ತಿಳಿಸಿದ್ದರೆ ಇನ್ನೂ ಅನುಕೂಲವಾಗುತ್ತಿತ್ತು. ಆದರೆ ಈ ಮಸೂದೆಯೂ ಕೂಡ ಇನ್ನು ಸೆಲೆಕ್ಟ್ ಸಮಿತಿಯ ಮುಂದೆ ಹೋಗಬಹುದು. ಇದರಲ್ಲಿ ಮುಖ್ಯವಾಗಿರುವಂಥ ವಿಚಾರವೇನೆಂದರೆ, ಹೀಗೆ ಒಂದು ಕಾನೂನನ್ನು ಮಾಡುವಾಗ ಇದನ್ನು ಅಖಿಲ ಭಾರತದ ದೃಷ್ಟಿಯಿಂದ ಅವರು ಮಾಡತಕ್ಕಂಥ ಕಾನೂನುಗಳಿಗೆ ಹೊಂದಿಕೊಂಡಿರುವಂತೆ ನಾವೂ ಸಹ ನಮ್ಮ ಕಾನೂನನ್ನು ಮಾಡತಕ್ಕದ್ದು ಯುಕ್ತವೆಂದು ಕಾಣುತ್ತದೆ. ಈಗ ಈ ಬಿಲ್ಲನ್ನು ಪಾಸ್‌ಮಾಡಿ ಒಂದು ಕಾನೂನನ್ನು ಜಾರಿಗೆ ತರದೆ ಹೋದರೆ ಅಂಥ ತಲೆ ಹೋಗುವಂಥಾ ಅನರ್ಥಗಳೇನಾದರೂ ಆಗುತ್ತವೆಯೇ ? ಆದುದರಿಂದ ಈ ವಿಚಾರವನ್ನು ನಾವು ಆಲ್ ಇಂಡಿಯಾ ಲೆವಲ್‌ನಲ್ಲಿ ಪರಿಶೀಲನೆ ಮಾಡುವುದು ಅತ್ಯಗತ್ಯ. ಈ ವಿಷಯಗಳನ್ನೆಲ್ಲಾ ಪರಿಶೀಲನೆಮಾಡಿ ನೋಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈಗ ಈ ಬಿಲ್ಲನ್ನು ತರತಕ್ಕಂಥ ಅಗತ್ಯವಿದೆಯೆಂಬುದೇ ನನ್ನ ಅಭಿಪ್ರಾಯವೂ ಸಹ ಆಗಿದೆ. ಈ ದಿವಸ ತಿಳಿಯದೆ ಇರತಕ್ಕಂಥ ಜನಗಳಿಗೆ ನಾನಾ ರೀತಿಯಲ್ಲಿ ಈ ಅಳತೆಯ ಸೇರುಗಳೂ ಮತ್ತು ತೂಕದ ಬಟ್ಟುಗಳೂ ಇರುವುದರಿಂದ ಅವರಿಗೆ ಅನೇಕ ರೀತಿಯಲ್ಲಿ ಈ ದಿವಸ ಮೋಸವಾಗುತ್ತಿದೆ. ಇದನ್ನು ತಪ್ಪಿಸುವುದು ಅತ್ಯಗತ್ಯ. ಈಗ ತಂದಿರತಕ್ಕಂಥ ಬಿಲ್ಲು ಹಿಂದೆ ಇದ್ದ ಆಕ್ಟಿಗಿಂತಲೂ ಉತ್ತಮವಾಗಿದೆಯೆಂದು ನಾನು ಭಾವಿಸುತ್ತೇನೆ. ಆದರೆ, ಇದರಲ್ಲಿ ನನಗೆ ಒಂದು ಅನುಮಾನವಿದೆ. ಈ ವಿಚಾರದಲ್ಲಿ ತಾವು ವರ್ತಕಮಂಡಲಿಯವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿತ್ತು. ಈ ದಿವಸದ ವ್ಯಾಪಾರಗಳು ಸುಗಮವಾಗಿ ನಡೆಯಬೇಕಾಗಿದ್ದರೆ ಇತರ ಪ್ರದೇಶಗಳಲ್ಲಿರುವಷ್ಟು ತೂಕ ಮತ್ತು ಅಳತೆ ಸಾಧನಗಳು ಯಾವ ರೀತಿಯಾಗಿರುತ್ತವೆಯೋ ಅದಕ್ಕೆ ಅನುಸರಿಸಿ ನಾವೂ ಸಹ ಇಲ್ಲಿ ಅದೇ ರೀತಿ ಏರ್ಪಾಡು ಮಾಡುವುದು ಒಳ್ಳೆಯದು.

4-30 P.M.

ಇದೂ ಅಲ್ಲದೇ ಈಗ ಇಂಡಿಯಾ ದೇಶದಲ್ಲೆಲ್ಲಾ ಒಂದು ಏಕ ಆಡಳಿತ ಇದ್ದು ಎಲ್ಲಾ ಕಡೆಯಲ್ಲಿಯೂ ಒಂದೇ uniform ಅಳತೆ ತೂಕವನ್ನು ತರತಕ್ಕ ಕರ್ತವ್ಯ ಇಂಡಿಯಾ ಸರ್ಕಾರಕ್ಕೆ ಇರುವುದರಿಂದ, ಅವರೂ ಕೂಡ ಈ ವಿಚಾರದಲ್ಲಿ ಏನು ಕಾರ್ಯ ಕ್ರಮ ತೆಗೆದುಕೊಳ್ಳಬಹುದೆಂಬುದನ್ನು ಆಲೋಚನೆಮಾಡಿ ಒಂದು ಕಾನೂನನ್ನು ಜಾಗ್ರತೆ ಜಾರಿಗೆ ತರುವವರಾಗಿದ್ದಾರೆ. ಅವರು ಹಾಗೆ ಜಾರಿಗೆ ತರುವ ಸಂದರ್ಭದಲ್ಲಿ 80 ತೊಲದ 40 ಸೇರಿನ ಬಂಗಾಳ ಮಣದ ತೂಕವನ್ನು ಅನುಸರಿಸಬಹುದು. ಏತಕ್ಕೆಂದರೆ ರೈಲ್ವೆ ತೂಕ ಈಗ ಬಳಕೆಯಲ್ಲಿದೆ. ಅದನ್ನು ಬದಲಾಯಿಸುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಿಲ್ಲ. ಸಾಮಾನ್ಯವಾಗಿ ವರ್ತಕರು ರೈಲ್ವೆ ಮುಖಾಂತರ ಸಾಮಾನುಗಳನ್ನು ಸಾಗಿಸುವುದು ಪದ್ಧತಿ. ಈ ತೂಕವು ಎಲ್ಲಾ ಕಡೆಯಲ್ಲಿಯೂ ಜಾರಿಯಲ್ಲಿದೆ. ಇಡೀ ಇಂಡಿಯಾ ದೇಶದ ಎಲ್ಲಾ ರೈಲ್ವೆಗಳಲ್ಲಿ ಈ ತೂಕ ಜಾರಿಯಲ್ಲಿದೆ. ನಾವೂ ಕೂಡ ಅದನ್ನೇ ಜಾರಿಗೆ ತಂದರೆ ಬಹಳ ಅನುಕೂಲವೆಂದು ನಾನು ಸೂಚನೆ ಕೊಡುತ್ತೇನೆ. ಮುಂದೆ ಒಂದು ದಿವಸ ಅದೇ ತೂಕ ಎಲ್ಲಾ ಕಡೆಗೂ ಅನ್ವಯಿಸುವ ಪರಿಸ್ಥಿತಿ ಇದೆ. ಈಗಲೂ ಕೂಡ ಎಲ್ಲಾ ಕಡೆಯಲ್ಲೂ ಅದು ಚೆನ್ನಾಗಿ ಬಳಕೆಯಲ್ಲಿದೆ. ಈ ತೂಕದ ಬಟ್ಟು, ಅಳತೆ ಸೇರು, ಕೊಳಗ ವಗೈರೆ ಮಾಡುವುದಕ್ಕೆ ಯಾರಿಗೂ ಲೈಸೆನ್ಸ್ ಕೊಡಬಾರದು. ಸರ್ಕಾರವೇ ಇದನ್ನು ಮಾಡುವ ಏರ್ಪಾಡು ಮಾಡಬೇಕು ಎಂದು ನಾನು ಸೂಚನೆ ಕೊಡುತ್ತೇನೆ. ಏತಕ್ಕೆಂದರೆ ಹಿಂದೆ ಅನೇಕವೇಳೆ ಇಂತಹ ಲೈಸೆನ್ಸ್ ಕೊಡಲಾಗಿದೆ. ಅವರು ಮೇಲಿನ ಹಿತ್ತಾಳೆಪಟ್ಟಿ ತೆಗೆದುಕೊಂಡು ಸೇರನ್ನು ಬದಲಾಯಿಸಿ, ಅನೇಕ ಮೋಸಗಳು ಕೂಡ ನಡೆದಿವೆ. ಆದ್ದರಿಂದ ಪೂರ್ತಿ ಬೆಸಗೆ ಇಲ್ಲದ ಏಕ ಸೇರು ತಯಾರು ಮಾಡಲು ಏರ್ಪಾಡು ಮಾಡಿದರೆ ಮೋಸ ಕಡಿಮೆ ಯಾಗುತ್ತದೆ ಎಂದು ಸೂಚಿಸುತ್ತೇನೆ.

ಅಧ್ಯಕ್ಷರು.—Monopoly Service ಆದರೆ cost ಜಾಸ್ತಿ ಆಗುತ್ತದೆಯೆಂದು ಆಗಲೇ ಹೇಳಿದರು.

ಶ್ರೀ ಬಿ. ಹುಚ್ಚೇಗೌಡ.—ಖರ್ಚು ಜಾಸ್ತಿ ಆದರೆ ಕೊಂಡುಕೊಳ್ಳುವವರು ಹೆಚ್ಚಾಗಿ ಕೊಡುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—Scientific process impose ಮಾಡಬೇಕು ಎಂದು ಇದೆ.

ಶ್ರೀ ಬಿ. ಹುಚ್ಚೇಗೌಡ.—ವ್ಯಾಪಾರಸ್ಥರಿಂದ ತೆಗೆದುಕೊಳ್ಳುವ ಸೇರಿಗಿಂತಲೂ ಇದು ಹೆಚ್ಚಿಗೆ ಬಾಳಿಕೆ ಬರುತ್ತದೆ. ಈಗಿನ ಕಾನೂನು ಪ್ರಕಾರದಲ್ಲೂ ಕೂಡ Weights and Measures Inspector ಇದ್ದಾರೆ. ಆದರೆ ಅವರು ಅಷ್ಟಾಗಿ ಈ ಕಾನೂನನ್ನು enforce ಮಾಡುತ್ತಾ ಇಲ್ಲ. ಜೊತೆಗೆ ಪೋಲೀಸಿನವರು ಕೂಡ ಈ ವಿಚಾರದಲ್ಲಿ ತಿಳಿವಳಿಕೆ ಕೊಟ್ಟರೆ, ಇದರಿಂದ ಪ್ರಯೋಜನವಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—Statutory Power ಇರುವುದು Weights and Measures Inspectors ಮಟ್ಟಿಗೆ.

ಶ್ರೀ ಬಿ. ಹುಚ್ಚೇಗೌಡ.—Enactment ಮಾಡಿದ ಮೇಲೆ ಪೋಲೀಸ್ ಆಫೀಸರ್ ಇದನ್ನು check ಮಾಡುವುದಕ್ಕಾಗುವುದಿಲ್ಲವೇ ?

Sri H. SIDDAVEERAPPA.—Unless he derives power, it cannot be done. For the purpose of this Act, we delegate certain powers to the Inspectors. We have got also certain sections in the Indian Penal Code in respect of false weights and measures; so, an offence may be committed even under the Indian Penal Code.

ಶ್ರೀ ಬಿ. ಹುಚ್ಚೇಗೌಡ.—Financial Memorandum ನಲ್ಲಿ staff ಗೆ ಕೇವಲ 60 ಸಾವಿರ ರೂಪಾಯಿಗಳನ್ನು ಒದಗಿಸಿದ್ದೀರಿ. ನನ್ನ ಅಭಿಪ್ರಾಯದಲ್ಲಿ ಆ ಹಣದಿಂದ ಡಿಸ್ಟ್ರಿಕ್ಟ್‌ಗೆ ಒಬ್ಬ Inspector ನಂತೆ ಈಗ ಇರುವಹಾಗೆಯೇ ಏರ್ಪಾಡು ಮಾಡುತ್ತಾರೆಂದು ಕಾಣುತ್ತದೆ. ಇದು control ಗೆ ಬರುವವರೆಗೂ ಸಾಧ್ಯವಾಗುವುದಿಲ್ಲ. Inspectors ಸಂಬಳದ ಬಗ್ಗೆ 60 ಸಾವಿರ ಕೊಟ್ಟರೆ, ಆಗ ಡಿಸ್ಟ್ರಿಕ್ಟಿಗೆ 6,000 ರೂಪಾಯಿಗಳಾಯಿತು. ಹೀಗೆ 6,000 ರೂಪಾಯಿಗಳಲ್ಲಿ maintain ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

Mr. SPEAKER.—The expenditure is an addition to the present expenditure.

Sri B. HUTCHE GOWDA.—Now there is only one Inspector in each district.

Sri H. SIDDAVEERAPPA.—This is an additional staff. The entire staff operate this Act. One senior officer will be there on Rs. 200-15-350. There will be two junior officers and then clerical staff. Then three Senior Inspectors in addition to the existing two posts at the rate of one for two districts on Rs. 60—200, 13 Inspectors of Weights and Measures on Rs. 40—100 and then they have got some attenders and things like that.

ಶ್ರೀ ಬಿ. ಹುಚ್ಚೇಗೌಡ.—ಇನ್ನು ಹೆಚ್ಚಾಗಿ ಹೇಳುವುದಿಲ್ಲ. ಇದು ಕಾನೂನು ಆದಮೇಲೆ strict ಆಗಿ enforce ಮಾಡಬೇಕಾದುದು ಬಹಳ ಜರೂರಾಗಿದೆ. ಇದನ್ನು ಕಾನೂನು ಮಾಡುವ ಮೊದಲು ಇಂಡಿಯಾ ಸರ್ಕಾರದವರ ಅಭಿಪ್ರಾಯ ತಿಳಿದುಕೊಂಡು, ಅವರು ಸದ್ಯದಲ್ಲಿ ಈ ಕಾನೂನು ಜಾರಿಗೆ ತರುವಹಾಗಿದ್ದರೆ, ನಾವು ಸ್ವಲ್ಪಕಾಲ ತಡೆಯುವುದು ಒಳ್ಳೆಯದೆಂದು ಕಾಣುತ್ತದೆ. ನಿಧಾನವಾದರೆ ಇದನ್ನು ಜಾರಿಗೆ ತರುವುದಕ್ಕೆ ಅಡ್ಡಿ ಇಲ್ಲ. ವರ್ತಕರ ಅಭಿಪ್ರಾಯದಲ್ಲಿ ಯಾವ ತೂಕವನ್ನು ಜಾರಿಗೆ ತರಬೇಕು ಎಂಬುದನ್ನು ನಾವು ತಿಳಿದುಕೊಂಡರೆ ಚೆನ್ನಾಗಿತ್ತು. ನಮ್ಮಲ್ಲಿ ಈಗ 24 ತೊಲದ 40 ಸೇರಿನ ಮಣ ಅನೇಕ ವರ್ಷಗಳಿಂದ ಇದೆ. ಆದರೆ ನಮ್ಮಲ್ಲಿ ಮಣ ಒಂದಕ್ಕೆ 30 ಪೌಂಡು, 27 ಪೌಂಡು, 28 ಪೌಂಡು ಇದೆ. ಅದೇ ರೀತಿಯಾಗಿ ನಡೆಸುತ್ತಲೇ ಇದ್ದಾರೆ. Inspector ಸಹ ಅದೇರೀತಿಯಾಗಿ ನಡೆಯುತ್ತಿದ್ದಾರೆ. 31 ಪೌಂಡು ಉಪಯೋಗಿಸುತ್ತಾರೆ. 1 ಪೌಂಡಿಗೆ 40 ರೂಪಾಯಿ ಆಗುವುದಿಲ್ಲ. 39 ರೂಪಾಯಿ 4 ಆಣೆ ಇರುತ್ತದೆ. ಆದ್ದರಿಂದ ಪೌಂಡು ಆಗಲೀ, ರೂಪಾಯಿ ಆಗಲೀ ಒಂದೇ ಒಂದು ತೂಕದ ಸೇರನ್ನು ನಿಷ್ಕರ್ಷೆ ಮಾಡಬೇಕು. ಸೇರು ಎನ್ನುವದು 24 ತೊಲದ ಸೇರೇ, ಅಥವ 80 ತೊಲದ ಬಂಗಾಳ ಸೇರೇ, ಎಂದು ನಿಗದಿ ಮಾಡುವುದು ಚೆನ್ನಾಗಿದೆ. ಅಂತೂ ಬಂಗಾಳ ತೂಕ ನಿಗದಿ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

*ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸರ್ಕಾರದವರು ನಮ್ಮ ಮುಂದಿಟ್ಟಿರುವ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಅಳತೆ ಮಾಡುವುದಕ್ಕೆ ಈಗ ಸೇರುಗಳನ್ನು ಉಪಯೋಗಿಸುತ್ತಿದ್ದಾರೆ. ಈ ಸೇರುಗಳನ್ನು ಮಾಡುವುದಕ್ಕೆ ಎಲ್ಲ ಕಡೆಯಲ್ಲೂ ಅವಕಾಶ ಕೊಟ್ಟಿದ್ದಾರೆ. ಹೀಗಾಗಿ ಪ್ರತಿಯೊಬ್ಬರೂ ತಮತಮಗೆ ಬೇಕಾದ ಹಾಗೆ ಸೇರುಗಳನ್ನು ಮಾಡಿಕೊಳ್ಳಬಹುದಾಗಿದೆ. ಇದರಿಂದಾಗಿ ಕೆಲವು ಕಡೆ ಐದು ಪಾವಿನ ಸೇರು ಕೂಡ ಬಂದಿದೆ. ವ್ಯಾಪಾರಗಾರರು ಕೆಲವರು ಐದು ಪಾವಿನ ಸೇರಿನಲ್ಲಿ ಕೊಂಡುಕೊಳ್ಳುತ್ತಿರುತ್ತಾರೆ, ನಾಲ್ಕು ಪಾವಿನ ಸೇರಿನಲ್ಲಿ ಮಾರುತ್ತಿರುತ್ತಾರೆ. ಇನ್ನೂ ಕೆಲವು ಕಡೆ ಮೂರು ಪಾವಿನ ಸೇರಿನಲ್ಲಿ ಕೊಡುವುದೂ ಉಂಟು. ಇದನ್ನೆಲ್ಲಾ ನೋಡಿದರೆ ಸರ್ಕಾರದಲ್ಲಿ ಯಾವ ನಿಯಮವಿಲ್ಲವೋ ಎಂದು ಭಾಸವಾಗುತ್ತದೆ. ವ್ಯಾಪಾರಸ್ಥರು ಈ ಅಳತೆ ಸೇರುಗಳನ್ನು ಉಪಯೋಗಿಸುವುದರಲ್ಲೂ ತಮ್ಮದೇ ಶಬ್ದಗಳನ್ನು ಉಪಯೋಗಿಸುತ್ತಿರುತ್ತಾರೆ. ದೊಡ್ಡಕಾಲು, ಚಿಕ್ಕಕಾಲು ಎಂದು ದೊಡ್ಡಸೇರು ಸಣ್ಣಸೇರುಗಳಿಗೆ ಹೇಳುತ್ತಿರುತ್ತಾರೆ. ಹಳ್ಳಿಯವರಿಗೆ ಇದೊಂದೂ ಗೊತ್ತಾಗುವುದಿಲ್ಲ. ತಕ್ಕಡಿಯಿಂದ ತೂಕ ಮಾಡುವುದರಲ್ಲೂ ಅವರದೇ ಒಂದು ರೀತಿಯ ದಂಡಿಗೆ ಇಟ್ಟುಕೊಂಡಿರುತ್ತಾರೆ. ಒಂದು ತೂಕವನ್ನೂ ಸರಿಯಾಗಿ ಮಾಡುವುದಿಲ್ಲ. ಈ ಕೈ ಆ ಕೈ ಹೊಡೆದು ಅವರ ಕೈಯಲ್ಲಿ ಒಂದು ನಿಮಿಷವೂ ತೂಕವನ್ನೇ ಹಿಡಿದಿರುವುದಿಲ್ಲ. ಈ ಕಡೆ ಒತ್ತಿದರೆ ರೈತನಿಗೆ ಹೋಯಿತು; ಆಕಡೆ ಒತ್ತಿದರೆ ಯಜಮಾನನಿಗೆ ಹೋಯಿತು. ಇನ್ನು ಕೆಲವರು ಹಳ್ಳದ ಕಲ್ಲುಗಳನ್ನೆಲ್ಲಾ ತಂದಿಟ್ಟುಕೊಂಡು ಅರ್ಧಸೇರು, ಒಂದು ಪಾವು, ಮತ್ತು ಸೇರಿನ ಬಟ್ಟುಗಳನ್ನು ಮಾಡಿಕೊಂಡಿರುತ್ತಾರೆ. ಸರಿಯಾದ ಕಬ್ಬಿಣದ ಕಲ್ಲು ಯಾರಲ್ಲೂ ಇರುವುದೇ ಇಲ್ಲ. ಹೊಳೆಯಲ್ಲಿರುವ ನುಣ್ಣನೆಯ ಕಲ್ಲುಗಳನ್ನು ತಂದು ಅದನ್ನೇ ಸರಿಯಾದ ಕಲ್ಲು ಎಂದು ಹೇಳಿ ಮೋಸ ಮಾಡುತ್ತಾರೆ. ಅನೇಕವೇಳೆ ನಾವು ಸಂಬಂಧಪಟ್ಟ ಇಲಾಖೆಯವರ ಹತ್ತಿರ ಹೋಗಿ ಹೀಗೆ ಅನ್ಯಾಯವಾಗುತ್ತಿದೆಯೆಂದು ಹೇಳಿದರೆ, ಅವರು "ಅವರನ್ನು ಕರೆದುಕೊಂಡು ಪೋಲಿಸ್ ಆಫೀಸಿಗೆ ಹೋಗಿ 'ಸರಿಯಾಗಿಲ್ಲ' ಎಂದು ತಿಳಿಸಿ" ಎಂದು ಹೇಳುತ್ತಾರೆ. ಅದರಂತೆ ಪೋಲೀಸ್ ಆಫೀಸಿಗೆ ಹೋದರೆ, ಅವರು "ಚೀಫ್ ಆಫೀಸರ ಹತ್ತಿರಹೋಗಿ" ಎಂದು ಹೇಳುತ್ತಾರೆ. ಈ ಕಷ್ಟವನ್ನು ತಪ್ಪಿಸಿ ಆಯಾ ತಾಲ್ಲೂಕುಗಳಲ್ಲಿ ಸಂತೆಗಳಲ್ಲಿ ಹೋಗಿ ಸರಿಯಾದ ಕಲ್ಲುಗಳನ್ನಿಟ್ಟಿದ್ದಾರೆಯೋ ಇಲ್ಲವೇ, ಸರಿಯಾಗಿ ತೂಕ ಮಾಡುತ್ತಿದ್ದಾರೆಯೋ ಇಲ್ಲವೇ ಎಂಬುದನ್ನು ನಿರ್ಧರ ಮಾಡುವಂತೆ ಸೂಚನೆ ಕೊಡಬೇಕೆಂದು ಹೇಳುತ್ತೇನೆ.

ನಮ್ಮ ಕಡೆಯಲ್ಲಿ ಲಬ್ಬೆಯವರು ಎಂಬವರಿದ್ದಾರೆ. ಅವರು ಹಸಿ ಚರ್ಮ ಮುಂತಾದುವುಗಳನ್ನು ಕೊಂಡುಕೊಳ್ಳುತ್ತಾರೆ. ಸ್ಪ್ರಿಂಗ್ ತಕ್ಕಡಿಗಳನಿಟ್ಟು ರಾತಲುಗಳ ಪ್ರಕಾರ ತೂಕ ಲೆಕ್ಕ ಹಾಕುತ್ತಿರುತ್ತಾರೆ. ಆ

ತಕ್ಕಡಿಗಳು ಎಷ್ಟು ಜಗ್ಗಿಸಿದರೂ ಜಗ್ಗುವುದೇ ಇಲ್ಲ. ಅವರು ಮಾರುವುದಕ್ಕೆ ಇನ್ನೊಂದು ತರಹ ಸ್ಪ್ರಿಂಗ್ ತಕ್ಕಡಿ ಇಟ್ಟುಕೊಂಡಿರುತ್ತಾರೆ. ಸ್ವಲ್ಪ ತೂಕ ಹಾಕಿತೆಂದರೆ ಸರಕ್ಕನೆ ಕೆಳಗಿಳಿಯುತ್ತದೆ. ಆದ್ದರಿಂದ ಇಂಥವುಗಳನ್ನೆಲ್ಲಾ ನೋಡಿ ನಿಗದಿಯಾದ ಒಂದು ಆಜ್ಞೆ ಮಾಡುವುದು ಅವಶ್ಯಕ,

ಕೆಲವು ಅಂಗಡಿಗಳಲ್ಲಿ ಸರ್ಕಾರಿ ಸೇರುಗಳಿಗೆ ತಳ ಕಟ್ಟುವುದೋ, ಕಂಠ ಮಸೆಯುವುದೋ ಹೀಗೆ ಮಾಡಿರುತ್ತಾರೆ ಇವೆಲ್ಲಾ ಮೋಸ ಮಾಡುವ ವಿಧಾನಗಳು. ಇವು ನಡೆಯದಂತೆ ನೋಡಿಕೊಳ್ಳಬೇಕು.

ಒಟ್ಟಿನಲ್ಲಿ ಸರ್ಕಾರದವರು ಈ ಮಸೂದೆಯನ್ನು ಸಮಯಕ್ಕೆ ಸರಿಯಾಗಿ ತಂದಿದ್ದಾರೆನ್ನಬಹುದು. ದೇಶದಲ್ಲಿ ಇಂಥ ಅನ್ಯಾಯಗಳು ನಡೆಯಕೂಡದೆಂಬ ಸದುದ್ದೇಶದಿಂದ ತಂದಿರುವ ಈ ಮಸೂದೆಯನ್ನು ಜಾರಿಗೆ ಕೊಟ್ಟು ಉಪಕಾರ ಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸರ್ಕಾರದವರು ಈ ಸಭೆಯ ಮುಂದೆ ಮಂಡಿಸಿರುವ ಈ ಮಸೂದೆಯನ್ನು ಇನ್ನೂ ಮುಂಚೆಯೇ ಜಾರಿಗೆ ತರಬೇಕಾಗಿದ್ದುದು ಅವಶ್ಯಕವಾಗಿತ್ತು ಎಂದು ನಾನು ಭಾವಿಸಿದ್ದೇನೆ. ಈಗಲಾದರೂ ಆದಷ್ಟು ಜಾಗ್ರತೆ ಜಾರಿಗೆ ತಂದು ರೈತರಿಗೆ ಮತ್ತು ದೇಶದಲ್ಲಿ ಇತರ ಸಾಮಾನುಗಳನ್ನು ವ್ಯಾಪಾರಸ್ಥರಿಗೆ ಒದಗಿಸಿಕೊಡತಕ್ಕ ಜನರಿಗೆ ಆಗುತ್ತಿರತಕ್ಕ ಅನ್ಯಾಯಗಳನ್ನು ತಡೆಗಟ್ಟಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಈಗಾಗಲೇ ಅಳತೆಯ ಸೇರು, ತೂಕದ ಸೇರು ಮುಂತಾದುವುಗಳನ್ನು ಉಪಯೋಗಿಸುವುದರಲ್ಲಿರುವ ನ್ಯೂನತೆಗಳನ್ನು ಮಾನ್ಯ ಸದಸ್ಯರು ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಅವರು ಹೇಳಿರುವುದು ಸತ್ಯವಾದುದು. ಒಂದು ನಿಗದಿಯಾದಂಥ ಮತ್ತು ಖಚಿತವಾದಂಥ ಅಳತೆ ಮತ್ತು ತೂಕದ ಸಾಧನವನ್ನು ಎಲ್ಲಾ ವ್ಯಾಪಾರಸ್ಥರೂ ಜಾರಿಗೆ ತರಬೇಕೆಂಬ ಒಂದು ಕಾನೂನು ಇಲ್ಲದಿರುವುದೇ ಈ ಎಲ್ಲ ನ್ಯೂನತೆಗಳಿಗೂ ಕಾರಣವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ಆಲೂಗೆಡ್ಡೆ, ಹುಣಸೆಹಣ್ಣು ಈರುಳ್ಳಿ ಮುಂತಾದುವುಗಳ ವ್ಯಾಪಾರದಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವಂತೂ ಹೇಳತೀರದು. ವರ್ತಕರು ಕೆಲವರು ಈ ಮಸೂದೆಯನ್ನು ಸಭೆಯಮುಂದೆ ಸರ್ಕಾರದವರು ಮಂಡಿಸಿದ ಸಮಯದಲ್ಲಿ, ಆಗಲೆ ಕಾತರರಾಗಿ ಇದಕ್ಕೆ ಎಲ್ಲಿ ಹೆಚ್ಚಿನ ಬೆಂಬಲ ದೊರೆಯುತ್ತದೆಯೋ, ತಮ್ಮ ಈಗಿನ ನಿಯಮಗಳನ್ನು ಬಿಟ್ಟುಕೊಡುವುದು ಹೇಗೆ ಎನ್ನುವ ಅಭಿಪ್ರಾಯದಿಂದ ಬಹಳ ಯೋಚನೆಯುಳ್ಳವರಾಗಿದ್ದಾರೆ. ಶ್ರೀ ಹುಚ್ಚೇಗೌಡರು ಹೇಳಿದರು, ವರ್ತಕರುಗಳಲ್ಲಿ ಮುಂದಾಳಾಗಿರುವವರ ಅಭಿಪ್ರಾಯವನ್ನು ತೆಗೆದುಕೊಂಡು ಈ ಮಸೂದೆಯನ್ನು ತಂದಿದ್ದರೆ ಚೆನ್ನಾಗಿತ್ತು ಎಂದು. ಹಾಗೆ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದರ ಅವಶ್ಯಕತೆಯೇನೂ ಕಾಣುವುದಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ವರ್ತಕರೇ ತೂಕ ಮತ್ತು ಅಳತೆ ಮುಂತಾದುವುಗಳಲ್ಲಿ ಲಾಭದಾಯಕವಾದ ಯೋಚನೆಗಳನ್ನಿಟ್ಟುಕೊಂಡು ವ್ಯಾಪಾರ ನಡೆಸುವವರು. ಹಾಗಿರುವಾಗ, ಆ ವ್ಯಾಪಾರಸ್ಥರನ್ನೇ ಇಂಥ ಬಿಲ್ಲಿನ ವಿಷಯದಲ್ಲಿ ಏನು ಹೇಳುತ್ತೀರಿ ಎಂದು ಕೇಳುವ ಪಕ್ಷಕ್ಕೆ ಸುಂಕದವನ ಮುಂದೆ ಸುಖದುಃಖ ಹೇಳಿಕೊಂಡಂತಾಗುತ್ತದೆ ಅಷ್ಟೆ. ರೈತರ ಹಿತದೃಷ್ಟಿಯಿಂದ ಈ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡತಕ್ಕದ್ದು ಅತ್ಯಂತ ಅವಶ್ಯಕ. ಆ ದೃಷ್ಟಿಯಿಂದಲೇ, ಈ ಕಾನೂನನ್ನು ತಂದಿರುವುದು ಸಮಯೋಚಿತವಾಗಿದೆ. ಈ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರೂ ಇದೇ ಕಾಲದಲ್ಲಿ ಇಂಡಿಯಾ ದೇಶಕ್ಕೆಲ್ಲಾ ಅನ್ವಯವಾಗುವ ರೀತಿಯಲ್ಲಿ ಒಂದು ಕಾನೂನನ್ನು ತರಬಹುದು. ಆ ಕಾನೂನು ಜಾರಿಗೆ ಬರುವವರೆಗೂ ಈ ಕಾನೂನನ್ನು ಹಾಗೆಯೇ ನಿಲ್ಲಿಸುವುದು ಸೂಕ್ತವೆಂದು ಒಬ್ಬಿಬ್ಬರು ಸದಸ್ಯರು ಸೂಚನೆ ಕೊಟ್ಟರು. ಆ ವಾದವನ್ನು ನಾನು ಒಪ್ಪಲಾರೆ. ಒಂದುವೇಳೆ ಆ ಕಾನೂನು ಬಂದರೆ, ಆ ಕಾನೂನಿಗೆ ತಕ್ಕಂತೆ ನಮ್ಮ ಕಾನೂನನ್ನು ಅಳವಡಿಸಿಕೊಳ್ಳುವುದೇನೂ ಕಷ್ಟವಲ್ಲ. ಆದ್ದರಿಂದ ಈಗ ಯಾವ ದೃಷ್ಟಿಯಿಂದ ಇದನ್ನು ತಂದಿದೆಯೋ, ರೈತರಿಗೆ ಸಹಾಯ ಮಾಡಬೇಕೆಂಬ ಯಾವ ಅಭಿಪ್ರಾಯ ನಿಮ್ಮಲ್ಲಿದೆಯೋ ಅದು ಸಾರ್ಥಕವಾಗಬೇಕಾದರೆ ಈ ಮಸೂದೆ ಆಗಬೇಕಾದದ್ದು ಅತ್ಯಗತ್ಯ. ಆದಷ್ಟು ಜಾಗ್ರತೆ ಇದನ್ನು ಜಾರಿಗೆ ತರಬೇಕು.

ಸ್ವಾಮಿ, ಇನ್ನೊಂದು ವಿಚಾರ ಮಾನ್ಯ ಸದಸ್ಯರು ಹೇಳಿದರು. ಅಳತೆಯಲ್ಲಿ ಆಗತಕ್ಕ ಹೆಚ್ಚು ಕಡಮೆಯನ್ನು ನೋಡಿಕೊಳ್ಳಲು ಸರಿಯಾದ ಅಧಿಕಾರವರ್ಗ ವಿರಬೇಕೆಂದು ಹೇಳಿದರು. ಇದು ಆವಶ್ಯಕ. ಏಕೆಂದರೆ, ಕಾನೂನನ್ನು ಜಾರಿಗೆ ಕೊಡುವುದೇನೋ ಸುಲಭ. ಆದರೆ ಅದನ್ನು ಕಾರ್ಯಗತ ಮಾಡುವ ಸರಿಯಾದ ಅಧಿಕಾರವರ್ಗವಿಲ್ಲದ ಪಕ್ಷಕ್ಕೆ, ನಿಮ್ಮ ಕಾನೂನುಗಳೆಲ್ಲಾ ಕಾಗದದಲ್ಲಿಯೇ ಉಳಿಯುತ್ತವೆಯೇ ವಿನಾ ಯಾವ ಉದ್ದೇಶಕ್ಕಾಗಿ ಮತ್ತು ಯಾರ ಸೌಕರ್ಯಕ್ಕಾಗಿ ಇದನ್ನು ತಂದಿದೆಯೋ ಆ consumer ಗಳಿಗಾಗಲಿ ರೈತರಿಗಾಗಲಿ ಅನುಕೂಲವಾಗಲಾರದು. ಆದ್ದರಿಂದ ಸರ್ಕಾರದವರು ಬಹಳ ಯೋಚನೆ ಮಾಡಿ, ಈ ಮಸೂದೆಯ ಜೊತೆಯಲ್ಲೇ ಅದಕ್ಕೆ ತಕ್ಕಂಥ ಸಿಬ್ಬಂದಿಯನ್ನೂ ಏರ್ಪಾಡು ಮಾಡತಕ್ಕದ್ದು ಬಹಳ ಒಳ್ಳೆಯದು.

ಒಟ್ಟಿನಲ್ಲಿ, ಈ ಮಸೂದೆಯಿಂದ ವ್ಯಾಪಾರದಲ್ಲಿ ಹಳ್ಳಿಯ ರೈತರಿಗೂ ಹಾಗೂ ಬಡಜನರಿಗೂ ಆಗುತ್ತಿರುವ ಆನ್ಯಾಯಗಳು ತಡೆಯಲ್ಪಟ್ಟು ದೇಶಕ್ಕೆ ಒಳ್ಳೆಯದಾಗುತ್ತದೆಂದು ಭಾವಿಸಿ ಈ ಮಸೂದೆಯನ್ನು ನಾನು ಸಮರ್ಥಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ನಮ್ಮ ಮುಂದೆ ಮಂಡಿಸಿರತಕ್ಕಂಥ ಮಸೂದೆಯನ್ನು ನಾನು ಸ್ವಾಗತಿಸುತ್ತ ಒಂದೆರಡು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ನಮ್ಮ ಹಾಸನದ ಟೌನಿನಲ್ಲಿ ಒಂದು ದೊಡ್ಡ ಸಂತೆಯಾಗುತ್ತದೆ. ಅಂಥ ಸಂತೆ ನಮ್ಮ ಮೈಸೂರು ದೇಶದಲ್ಲಿ ಇನ್ನೆಲ್ಲಿಯೂ ಆಗುವುದಿಲ್ಲ. ಆ ಸಂತೆಯಲ್ಲಿ ಅಕ್ಕಿ, ರಾಗಿ, ಮೆಣಸಿನಕಾಯಿ, ಬೆಲ್ಲ ಇತ್ಯಾದಿ ಇನ್ನೂ ಅನೇಕ ಸಾಮಾನುಗಳ ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ. ಈ ಸಂತೆಯಲ್ಲಿ ಅಳೆಯುವ ಸೇರು ಪಾವು ಮತ್ತು ತಕ್ಕಡಿ ಬಟ್ಟುಗಳಲ್ಲಿ ಜನರಿಗೆ ಆ ವರ್ತಕರು ಬಹಳ ಅನ್ಯಾಯ ಮಾಡುತ್ತಿದ್ದಾರೆ. ಈ ವಿಚಾರವಾಗಿ ನಾನು ಹಿಂದೆ ಒಂದು ಪತ್ರವನ್ನೇ ಸಂಬಂಧಪಟ್ಟ ಮಂತ್ರಿಗಳಿಗೆ ಬರೆದಿದ್ದೆನು. ಆ ಪತ್ರದಲ್ಲಿ ನಾನು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಸರಿಯಾಗಿ ಈ ವಿಚಾರಗಳ ನಿಗಾ ನೋಡಿಕೊಳ್ಳುತ್ತಿಲ್ಲ, ರೈತಾಪಿ ಜನರಿಗೆ ಬೇಕಾದಷ್ಟು ಅನ್ಯಾಯಗಳಾಗುತ್ತಿವೆಯೆಂದು ತಿಳಿಸಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಈಗ ಇರುವ ಕಾನೂನಿನಿಂದ ಏನೂ ಮಾಡುವುದಕ್ಕಾಗುವುದಿಲ್ಲ, ಇದಕ್ಕಾಗಿ ಬೇರೆ ಒಂದು ಮಸೂದೆಯನ್ನು ತಂದು ಪಾಸ್‌ಮಾಡಿಸಬೇಕಾಗಿದೆ, ಆಗ ಇಂಥ ತಪ್ಪಿತಸ್ಥರಿಗೆ ಹೆಚ್ಚು ಶಿಕ್ಷೆ

(ಎಚ್. ಕೆ. ಸಿದ್ದಯ್ಯ.)

ಮಾಡುವುದಕ್ಕೆ ಆಗುತ್ತದೆ ಎಂದು ನನಗೆ ಒಂದು ಸಮಾಧಾನದ ಮಾತನ್ನು ಹೇಳಿದ್ದಾರೆ. ಇದೇ ವಿಚಾರ ಕಳೆದ ಸಭೆಯಲ್ಲೂ ಬಂದಿತ್ತು. ಈಗಲೇ ಈ ವಿಚಾರ ವಿಳಂಬವಾಗಿ ಬಂದಿದೆ. ಆದುದರಿಂದ ಸರ್ಕಾರದವರು ಇದನ್ನು ಜಾಗ್ರತೆ ಕಾರ್ಯರೂಪಕ್ಕೆ ತರಬೇಕು. ಇದನ್ನು ಚರ್ಚೆಮಾಡಿ ಇಲ್ಲಿಗೇ ಬಿಟ್ಟುಬಿಡಬಾರದು. ನಾವು ಈ ಅಧಿವೇಶನವನ್ನು ಮುಗಿಸಿಕೊಂಡು ವಾಪಸ್ಸು ಊರುಗಳಿಗೆ ಹೋಗುವುದರೊಳಗಾಗಿ ಈ ಕಾನೂನು ಜಾರಿಗೆ ಬರುವಂತೆ ನಮ್ಮ ಸಚಿವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಈ ದಿವಸ ನಮ್ಮ ಹಾಸನ ಟೌನಿನಲ್ಲಿ ನಡೆಯುವ ಸಂತೆಗಳಲ್ಲಿ ಒಂದು ಸಾರಿ ಒಬ್ಬ ರೈತನು ಒಂದು ಪಲ್ಲ ರಾಗಿ ಅಳಸಿದ್ಧಕ್ಕೆ ಬೇರೆ ಸೇರಿನಲ್ಲಿ ಅಳೆದಾಗ ಹತ್ತು-ಹನ್ನೆರಡು ಸೇರುಕಮ್ಮಿ ಬಂತು. ಈಗ ಅಲ್ಲಿರುವ ವರ್ತಕರು ಒಂದು ಪಲ್ಲ ದವಸವನ್ನು ನಲವತ್ತು ರೂಪಾಯಿಗಳಿಗೆ ಕೊಂಡು, ನಲವತ್ತು ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಹೀಗೆ ಅವರು ಕೊಂಡ ಧಾರಣೆಗೇ ಮಾರಾಟ ಮಾಡಿದರೆ ಅವರಿಗೆ ಲಾಭ ಹೇಗೆ ಬರುತ್ತದೆ ? ಸ್ವಾಮಿ, ಈ ಹಿಂದೆ ಇದ್ದ ಫುಡ್ ಇಲಾಖೆಯನ್ನು ತೆಗೆದ ಮೇಲಂತೂ ಅಲ್ಲಿ ಅಳತೆಮಾಡುತ್ತಿದ್ದಂಥ ಮಹಾನುಭಾವರುಗಳೆಲ್ಲಾ ಈಗ ಈ ಸಂತೇ ವ್ಯಾಪಾರಗಳಿಗೆ ಇಳಿದುಬಿಟ್ಟಿದ್ದಾರೆ. ಅವರು ಹಿಂದೆ ಸರ್ಕಾರಿ ಡಿಪೋಗಳಲ್ಲಿದ್ದಾಗ ಅಕ್ಕಿ, ರಾಗಿ, ಮುಂತಾದವನ್ನು ಅಳತೆ ಮಾಡುತ್ತಿದ್ದರು. ಅದು ದೇವರಿಗೇ ಪ್ರೀತಿಯಾಗಬೇಕಾಗಿತ್ತು. ಅಂಥ ಅನ್ಯಾಯವನ್ನು ಅವರು ಈ ಅಳತೆಯಲ್ಲಿ ಮಾಡುತ್ತಿದ್ದರು. ಅಂಥ ಸಾತ್ವಿಕರೂ ಈ ದಿವಸ ಈ ಸಂತೆಗಳಿಗೆ ಅಳತೆ ಮಾಡಲು ಬಂದುಬಿಟ್ಟಿದ್ದಾರೆ. ಅವರಿಂದ ಜನರಿಗೆ ತುಂಬ ಅನ್ಯಾಯವಾಗುತ್ತಿದೆ. ಆದಕಾರಣ ತಾವೀಗ ಈ ಕಾನೂನು ತಂದಿರುವುದು ಬಹಳ ಒಳ್ಳೆಯದಾಗಿರುತ್ತದೆ. ಈ ಮಸೂದೆಯನ್ನು ತಾವು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಈ ಮಸೂದೆಗೆ ನನ್ನ ಆತ್ಮ ಸಂತೋಷದಿಂದ ಅನುಮೋದನೆಯನ್ನಿತ್ತು ಈ ಎರಡು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ನಮ್ಮ ಸರ್ಕಾರದವರಿಗೂ ಮತ್ತು ಮಾನ್ಯ ಸಭೆಗೂ ನಮ್ಮ ಸಭಾಧ್ಯಕ್ಷರಿಗೂ ಮಾನ್ಯ ಸದಸ್ಯರಿಗೂ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಸ್ವಾಮಿ, ಈಗ ನಮ್ಮ ಸಚಿವರು ನಮ್ಮ ಸಭೆಯಮುಂದೆ ಮಂಡಿಸಿರತಕ್ಕ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನನಗೆ ಯಾವಾಗಲೂ ಸ್ವಲ್ಪ ಈ ವ್ಯಾಪಾರಸ್ಥರಲ್ಲಿ ಒಡನಾಟ ಜಾಸ್ತಿ ; ಅಂದರೆ ರೈತರಲ್ಲಿ ಒಡನಾಟವಿಲ್ಲವೆಂದು ಅಲ್ಲ. ಆದರೆ ಈ ದಿವಸ ರೈತನು ತಾನು ಬೆಳೆದಂಥ ಸಾಮಾನುಗಳನ್ನು ಮಾರಾಟ ಮಾಡಲು ಪೇಟೆಗೆ ತೆಗೆದುಕೊಂಡು ಹೋದರೆ ಅಲ್ಲಲ್ಲಿ ಯಾವರೀತಿ ವ್ಯವಹಾರಗಳು ನಡೆಯುತ್ತವೆಂಬುದು ತಮಗೆಲ್ಲರಿಗೂ ಗೊತ್ತಿರುವಂಥ ವಿಚಾರವೇ ಆಗಿದೆ. ಒಂದೊಂದು ಅಂಗಡಿಯಲ್ಲೂ ಒಂದೊಂದು ರೀತಿಯ ಅಳತೆ ಸೇರುಗಳಿರುತ್ತವೆ. ಒಬ್ಬರ ಅಂಗಡಿಯಲ್ಲಿ ಇಪ್ಪತ್ತೆರಡು ರೂಪಾಯಿಗಳ ತೂಕದ ಸೇರುಕಲ್ಲಿದ್ದರೆ, ಇನ್ನೊಂದು ಅಂಗಡಿಯಲ್ಲಿ ಇಪ್ಪತ್ತೈದು ತೊಲಗಳ ಸೇರುಕಲ್ಲಿರುತ್ತದೆ. ಹೀಗೆ ಒಂದೊಂದು ಅಂಗಡಿಯಲ್ಲಿ ಒಂದೊಂದು ರೀತಿಯಾಗಿ ಅಳತೆಯ ಮತ್ತು ತೂಕದ ಸಾಧನಗಳಿರುತ್ತವೆ. ಒಂದು ಕಡೆ ಮಣಕ್ಕೆ ನಲವತ್ತೆಂಟು ಸೇರುಗಳು. ಮತ್ತೊಂದು ಕಡೆ ಮಣಕ್ಕೆ ಮೂವತ್ತೆರಡು ಸೇರುಗಳು. ಇನ್ನು ಕೆಲವು ದಿನಸಿಗಳ ಬಗ್ಗೆ ಒಂದು ಸಾಮಾನನ್ನು ಒಂದು ಅಂಗಡಿಯಲ್ಲಿ ಮಣ ಒಂದಕ್ಕೆ ನಲವತ್ತೆಂಟು ಸೇರಿನಂತೆ ಕೊಟ್ಟರೆ ಅದೇ ಅಂಗಡಿಯಲ್ಲಿ ಮತ್ತೊಂದು ಸಾಮಾನನ್ನು ಮಣಕ್ಕ ಮೂವತ್ತೈದು ಸೇರಿನಂತೆ ಕೊಡುತ್ತಿದ್ದಾರೆ. ಹೀಗೆಲ್ಲಾ ಮಾಡುತ್ತಿರುವುದರಿಂದ ನಿಜವಾಗಿಯೂ ಜನರು ಬಹಳ ಮೋಸ ಹೋಗುತ್ತಿದ್ದಾರೆ. ಆದರೆ ಈಗಾಗಲೇ ನಮ್ಮ ಶ್ರೀ ಸಿ. ಟಿ. ಹನುಮಂತಯ್ಯನವರು ಹೇಳಿದ ಹಾಗೆ ಈ ತೂಕಮಾಡತಕ್ಕವರು ಆ ದಂಡಿಗೆ ಆಡಿಸುವಂಥ ಆ ಒಂದು ವಿಚಿತ್ರವನ್ನು ಎಲ್ಲಿ ಕಲಿತರೋ ಕಾಣೆ. ಅದರಿಂದ ಜನರಿಗೆ ಬಹಳ ಮೋಸವಾಗುತ್ತಿದೆ. ಇನ್ನು ಮುಂದಕ್ಕೆ ಆ ದಂಡಿಗೆ ಹಿಡಿಯತಕ್ಕಂಥ ಪದ್ಧತಿಯನ್ನೇ ತಪ್ಪಿಸಬೇಕೆಂದು ಹೇಳುತ್ತೇನೆ. ಮಂಡಿಗಳಿಂದ ಹಿಡಿದು ತೀರ ಚಿಕ್ಕ ಅಂಗಡಿಯವರೆಗೂ ಎಲ್ಲರೂ ಚಿಂತಾಲುಗಳನ್ನೇ ಉಪಯೋಗಿಸುವಂತೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಈ ಚಿಕ್ಕ ಅಳತೆ ಮತ್ತು ದೊಡ್ಡ ಅಳತೆ ಎಂದು ಇರತಕ್ಕದ್ದನ್ನೂ ಕೂಡ ಕಡ್ಡಾಯವಾಗಿ ತಪ್ಪಿಸುವಂತೆ ಮಾಡಬೇಕಾಗಿದೆ. ಹೀಗೆಲ್ಲಾ ಈ ಅಳತೆ ಸಾಧನಗಳಲ್ಲಿ ವ್ಯತ್ಯಾಸವಿರುವುದರಿಂದ ಮೂವತ್ತು ಸೇರುಕಾಳನ್ನು ಅಳೆಸಿದರೆ ಪುನಃ ಅದನ್ನು ಮನೆಗೆ ತಂದು ಅಳತೆ ಮಾಡಿ ನೋಡಿದರೆ ಅದು ಇಪ್ಪತ್ತಮೂರು ಸೇರೇ ಆಗುವುದು. ಹೀಗೆ ಯಾವ ಅಳತೆಯನ್ನೇ ತೆಗೆದುಕೊಳ್ಳಲಿ ತುಂಬ ಮೋಸಗಳು ನಡೆಯುತ್ತಿವೆ. ಬಟ್ಟೆ ಅಳೆಯುವುದರಲ್ಲೂ ಹೀಗೆ ಮೋಸ. ಈ ರೀತಿ ನಡೆಯುತ್ತಿರುವುದನ್ನು ನಾನೇ ಎಷ್ಟೋ ಸಲ ನೋಡಿದ್ದೇನೆ. ಈ ಅಳತೆಯಲ್ಲಿ ಆಗತಕ್ಕ ಮೋಸವನ್ನು ತಕ್ಕಮಟ್ಟಿಗಾದರೂ ತಡೆಗಟ್ಟಲು ಸಾಧ್ಯವಾಗುವಂತೆ ಮಾಡಬೇಕಾದರೆ ಅಳತೆಯಲ್ಲಿ ತಲೆ ಸವರಿ ಅಳತೆ ಮಾಡಬೇಕೆಂದು ತಾವು ಒಂದು ನಿಗದಿ ಮಾಡಬೇಕು. ಇದರಿಂದ ಕೊಳ್ಳತಕ್ಕವರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಹೀಗೆ ಮಾಡಬೇಕೆಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ. ನಾನು ಈ ಮಸೂದೆಗೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ.

Mr. SPEAKER.—The House will grant five more minutes.

Sri H. SIDDAVEERAPPA.—I pray if it is possible, another half an hour may be given and if possible we may get the Bill passed. I am making a suggestion, Sir. Probably there may not be very many speakers since there is an unanimous general approval for this Bill. Moreover, the weather is very inclement outside.

Mr. SPEAKER.—How many Hon'ble Members want to speak ?

(*Many Hon'ble Members rose*).

Mr. SPEAKER.—There are a good number of people.

Sri H. SIDDAVEERAPPA.—If it is your intention to take it up tomorrow, I want to speak for two minutes and make a certain clarification.

ಶ್ರೀ ಟಿ. ಸಿ. ಬಸಪ್ಪನವರು ಈ ಪ್ರೈಮರಿ ಸ್ಟಾಂಡರ್ಡ್ ವೈಟ್ಸ್ ಅಂಡ್ ಮೆಜರ್ಸ್ ಆಪರೇಟಸ್ ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಡೆಪ್ಯುಟಿ ಕಮಿಷನರುಗಳ ಕಛೇರಿಯಲ್ಲಿ ಇಟ್ಟಿರುವುದರಿಂದ ಜನಗಳಿಗೆ ಪ್ರತಿಯೊಂದು ಸಂದರ್ಭದಲ್ಲಿಯೂ ಡೆಪ್ಯುಟಿ ಕಮಿಷನರ್ ಅವರ ಆಫೀಸಿಗೆ ಹೋಗಲು ತೊಂದರೆಯಾಗುತ್ತದೆ. ಆದುದರಿಂದ ಅವುಗಳನ್ನು ಎಲ್ಲಾ ತಾಲ್ಲೂಕು ಆಫೀಸುಗಳಲ್ಲಿಯೂ ಇಡುವಂತೆ ಮಾಡಬೇಕೆಂದು ಹೇಳಿದರು. ಆದರೆ ಅಂಥ ತೊಂದರೆಗಳೇನೂ ಇದರಿಂದ ಉಂಟಾಗುವುದಿಲ್ಲ. ಈ ಅಳತೆ ಮತ್ತು ತೂಕದ ಸಾಧನಗಳಲ್ಲಿ ಎರಡು ಭಾಗವಿದೆ. ಒಂದು ಪ್ರೈಮರಿ ಸ್ಟ್ಯಾಂಡರ್ಡ್, ಮತ್ತೊಂದು ವರ್ಕಿಂಗ್ ಸ್ಟ್ಯಾಂಡರ್ಡ್. ಈ ಪ್ರೈಮರಿ ಸ್ಟ್ಯಾಂಡರ್ಡ್‌ನ್ನು ಯಾವಾಗಲೂ ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ಇಡಲಾಗುವುದು. ಇನ್ನು ಎಲ್ಲಾ ಕಡೆಗಳಲ್ಲೂ ಈ ವರ್ಕಿಂಗ್ ಸ್ಟ್ಯಾಂಡರ್ಡ್‌ಗಳು ಇದ್ದೇ ಇರುತ್ತವೆ. ಯಾವುದಾದರೂ ಸಂದರ್ಭಗಳಲ್ಲಿ ಯಾರಾದರೂ ನಿಮ್ಮ ಈ working standard ಸರಿಯಾಗಿಲ್ಲ ಎಂದು ವಾದಿಸಿದರೆ ಆಗ ಆ ವರ್ಕಿಂಗ್ ಸ್ಟ್ಯಾಂಡರ್ಡ್ ಸರಿಯಾಗಿದೆಯೋ ಅಥವಾ ಇಲ್ಲವೇ ಎನ್ನುವುದನ್ನು ಪರೀಕ್ಷೆ ಮಾಡಲು ಮಾತ್ರ ಜಿಲ್ಲಾಧಿಕಾರಿಗಳ ಆಫೀಸಿಗೆ ಹೋಗಿ ಆ ಪ್ರೈಮರಿ ಸ್ಟಾಂಡರ್ಡ್‌ನೊಂದಿಗೆ ಹೋಲಿಕೆ ಮಾಡಿ ನೋಡಬೇಕಾಗುತ್ತದೆ. ಅಷ್ಟು ಹೊರತು ಪ್ರತಿಯೊಬ್ಬರೂ, ಪ್ರತಿಯೊಂದು ಸಂದರ್ಭದಲ್ಲೂ ಹಾಗೆ ಡೆಪ್ಯುಟಿ ಕಮಿಷನರ ಆಫೀಸಿಗೆ ಹೋಗತಕ್ಕಂಥ ಪ್ರಮೇಯವೇ ಇರುವುದಿಲ್ಲ. ಆದಕಾರಣ ತಾವೆಲ್ಲರೂ ಇದಕ್ಕೆ ಅನುಮೋದಿಸಬಹುದು.

Mr. SPEAKER.—The House will now rise and meet at 8-30 A.M. tomorrow.

The House rose for the day at Five of the Clock to meet again at Thirty Minutes past Eight of the Clock on Friday, the 1st April 1955.